**7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದ.ಕ., ಮಂಗಳೂರು, ಕಾರ್ಯನಿರ್ವಹಣೆ, ಪುತ್ತೂರು, ದ.ಕ.**

# ಸ್ಪೆಷಲ್ ಕೇಸ್ ನಂಬ್ರ 5010/2022

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪವಿತ್ರಾ (ನೊಂದ ಬಾಲಕಿಯ ತಾಯಿ ಹಾಗೂ ಪಿರ್ಯಾದಿದಾರರು) | ಪ್ರಾಸಾಃ 2 |
| ಗಂಡನ ಹೆಸರು | : | ಬಿ ಪುವಪ್ಪ ಗೌಡ | ಚಾಸಾಃ 2 |
| ಪ್ರಾಯ | : | 38 ವರ್ಷ | **ದಿನಾಂಕಃ 10.06.2026** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಗೃಹಿಣಿ | |
| ವಾಸಸ್ಥಳ | : | ಶೆಟ್ಟಿಗದ್ದೆ ಮನೆ, ಕಲ್ಮಡ್ಕ ಗ್ರಾಮ, ಸ್ಯು ತಾಲೂಕು, ದ.ಕ. | |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರಕಾರಿ ಅಭಿಯೋಜಕರಿಂದಃ**

ಪ್ರಾಸಾ.1/ನೊಂದ ಬಾಲಕಿ ನನ್ನ ಮಗಳು. ಚಾಸಾ.3 ನನ್ನ ಗಂಡ. ಚಾಸಾ.4 ನನ್ನ ದೊಡ್ಡ ಮಗಳು. ನನಗೆ ಆರೋಪಿಯ ಪರಿಚಯ ಇರುತ್ತದೆ. ಆತ ನಮ್ಮ ಮನೆಯ ಎದುರಗಡೆ ಮನೆಯಲ್ಲಿ ವಾಸವಾಗಿರುತ್ತಾನೆ. ನಮ್ಮ ಮನೆ ಹಾಗೂ ಅವರ ಮನೆ ಮದ್ಯೆ ಒಂದು ರಸ್ತೆ ಇರುತ್ತದೆ.

2. ದಿಃ 26.09.2020 ರಂದು ರಾತ್ರಿ 08.10 ನಿಮಿಷ ಸಮಯದಲ್ಲಿ ಪಾಸಾ.1 ರವರು ಸ್ನಾನ ಮಾಡಲು ಹೋಗಿದ್ದಳು. ನಮ್ಮ ಮನೆಯ ಹೊರಡಗೆ ಎಡಗಡೆ ಭಾಗ ಸ್ನಾನ ಗೃಹ ಇರುತ್ತದೆ. ಅದಕ್ಕೆ ಸಿಮೆಂಟ ಶೀಟ್‌ಗಳನ್ನು ಹಾಕಲಾಗಿರುತ್ತದೆ. ಆ ಸಂದರ್ಬದಲ್ಲಿ ಪ್ರಾಸಾ.1 ರವರು ಶವರನಲ್ಲಿ ನೀರು ಬರದೇ ಇದ್ದ ಕಾರಣ ಮೇಲೆ ನೋಡಿದಾಗ ಸ್ನಾನ ಗೃಹದ ದಕ್ಷಿಣ ದಿಕ್ಕಿನ ಗೋಡೆಯ ಮತ್ತು ಶೀಟ್‌ನ ಮದ್ಯದಲ್ಲಿ ಅಲ್ಲಿ

ಒಂದು ಫೋನ್ ಇದ್ದದನ್ನು ಗಮನಿಸಿರುತ್ತಾಳೆ. ಅದಾದ ನಂತರ ಪಾಸಾ.1 ರವರು, ಚಾಸಾ.3 ರನ್ನು ಕರೆದು ಫೋನ್ ಇದ್ದ ಬಗ್ಗೆ ವಿಷಯವನ್ನು ತಿಳಿಸಿರುತ್ತಾಳೆ. ಆಗ ನಾನೂ ಸಹ ಓಡಿ ಹೋಗಿರುತ್ತೇನೆ. ಆಗ ಚಾಸಾ.3 ರವರು ಸಹ ಸ್ನಾನ ಗೃಹದ ಮುಂದೆ ಇರುವ ಅಂಗಡಿಯಿಂದ ಓಡಿ ಬಂದರು. ಆಗ ಚಾಸಾ.3 ರವರು ಫೋನನ್ನು ತೆಗೆದುಕೊಳ್ಳಲಿಕ್ಕೆ ಹೋದಾಗ, ಆ ಫೋನ ಅನ್ನು ನ್ಯಾಯಾಲದ ಮುಂದೆ ಇರುವ ಆರೋಪಿ ಕೈಯಿಂದ ಫೋನನ್ನು ಎಳೆದುಕೊಂಡು ಸುಬ್ಬಯ್ಯ ರೈ ರವರು ಮನೆಯ ಗೇಟ್ ಮೂಲಕ ಓಡಿ ಹೋದರು. ಆರೋಪಿಯು ಓಡಿ ಹೋದದ್ದನ್ನು ನಮ್ಮ ಮನೆಯ ಲೈಟ್, ರಸ್ತೆಯ ಲೈಟ್ ಹಾಗೂ ಸುಬ್ಬಯ್ಯ ರೈ ಮನೆಯ ಲೈಟ್ ನ ಬೆಳಕಿನಿಂದ ನೋಡಿದೆವು. ಆರೋಪಿ ಓಡಿ ಹೋಗಿ ತನ್ನ ಮನೆಯನ್ನು ಸೇರಿಕೊಂಡನು.

3. ಆಗ ಚಾಸಾ.3 ರವರು ಆರೋಪಿ ತಂದೆಗೆ ಫೋನ್ ಮಾಡಿ ವಿಷಯ ತಿಳಿಸಿದ್ದು ಇರುತ್ತದೆ. ಆಗ ಆರೋಪಿ ತಂದೆಯು ನಾನು ಆರೋಪಿಗೆ ಬುದ್ದಿ ಹೇಳಿ ಆಸ್ವಸನೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ.

4. ತದನಂತರ ದಿಃ 27.09.2020 ರಂದು ಆರೋಪಿಯು ಚಾಸಾ.3 ರವರು ತೋಟದಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಹಲ್ಲೆ ಮಾಡಲು ಪ್ರಯತ್ನಿಸಿದ್ದನು. ಆಗ ಆರೋಪಿ ಮನೆಯಲ್ಲಿದ್ದ ಆದಿತ್ಯ ಮತ್ತು ಅಕ್ಷಯ ಎಂಬ ಹುಡುಗರು ಆತನನ್ನು ಎಳೆದುಕೊಂಡು ಹೋಗಿದ್ದು ಇರುತ್ತದೆ.

5. ಆರೋಪಿಯ ಮನೆಯ ಮುಂದೆ ನಿಂತರೆ ನಮ್ಮ ಮನೆ ಕಾಣುತ್ತದೆ. ಆರೋಪಿಯು ತಮ್ಮ ಮನೆಯಿಂದ ಕೈ ಸನ್ನೆಗಳನ್ನು ಪ್ರಸಾ.1 ರವರಿಗೆ ಮಾಡುತ್ತಿದ್ದ. ತದನಂತರ ನಾನು ಪೋಲಿಸ್ ಠಾಣೆಯಲ್ಲಿ ದೂರನ್ನು ಆರೋಪಿ ವಿರುದ್ದ ದಿಃ 29.09.2020 ರಂದು ನೀಡಿರುತ್ತೇನೆ. ನಾನು ಸದರಿ ದೂರನ್ನು ನೋಡಿ ಗುರುತಿಸುತ್ತೇನೆ. ಸದರಿ ದೂರನ್ನು ನೋಡಿ ಗುರುತಿಸಿದ್ದರ ಮೇರೆಗೆ ದೂರನ್ನು **ನಿ.ಪಿ.2** ಎಂದು, ಅವರ ಸಹಿಯನ್ನು **ನಿಪಿ.2(ಎ)** ಎಂದು ಗುರುತಿಸಲಾಯಿತು.

6. ನಮ್ಮ ಅಂಗಡಿ ಹತ್ತಿರು ನಮ್ಮ ಮಕ್ಕಳು ಆಟ ಆಡುತ್ತಿರುವಾಗ ಆರೋಪಿಯು ತನ್ನ ಮೊಬೈಲ್ ಪೋನನಿಂದ ಛಾಯಾಚಿತ್ರಗಳನ್ನು ತೆಗೆದುಕೊಂಡಿರುತ್ತಾನೆ. ದಿಃ 26.09.2020 ರ ಮುಂಜೆ ನನ್ನ ದೊಡ್ಡ ಮಗಳು ಚಾಸಾ.4 ಸ್ನಾನ ಮಾಡುತ್ತಿರುವಾಗ ಬೆಳಿಗ್ಗೆ 05.10 ಗಂಟೆಗೆ ಸ್ನಾನ ಗೃಹದ ಕಿಟಕಿಯಿಂದ ಆರೋಪಿಯು ತನ್ನ ಮೊಬೈಲ್ ನಿಂದ ವಿಡಿಯೋ ಮಾಡುತ್ತಿರುವುದು ನೋಡಿದ್ದಾರೆ. ಸದರಿ ವಿಷಯವನ್ನು ಚಾಸಾ.4 ರವರು ನನಗೆ ತಿಳಿಸಿರುತ್ತಾರೆ. ಅದಾದ ನಂತರ ಸದರಿ ವಿಷಯದ ಬಗ್ಗೆ ನಾವು ಪತ್ತೆ ಹಚ್ಚಲು ಕಾಯುತ್ತಿದ್ದೆವು. ದಿಃ 26.09.2020 ರಂದು ಘಟನೆ ನಡೆದ ನಂತರ ನಾವು ಸುಮ್ಮನಿದ್ದೆವು ಮತ್ತು 27.09.2020 ರಂದು ಆರೋಪಿಯು, ಚಾಸಾ.3 ರ ಮೇಲೆ ಹಲ್ಲೆ ಮಾಡಿದ್ದು, ಹಲ್ಲೆ ಮಾಡಿದ ನಂತರ ಆರೋಪಿ ತಂದೆಯು ನಮ್ಮ ಮೇಲೆ ದೂರು ಸಲ್ಲಿಸಿದ್ದರು, ಆಗ ನಾವು ಸಹ ದೂರು ಕೊಟ್ಟಿವು.

7. ದೂರು ದಾಖಲಾದ ನಂತರ ಬೆಳ್ಳಾರೆ ಪೋಲಿಸ ಠಾಣೆ ಅಧಿಕಾರಿಗಳು ಸ್ಥಳ ಮಹಜರನ್ನು ಮಾಡಿರುತ್ತಾರೆ. ಸದರಿ

ಸಂದರ್ಭದಲ್ಲಿ ನಾನೇ ಪೋಲಿಸ ಅಧಿಕಾರಿಗಳಿಗೆ ಘಟನೆ ಸ್ಥಳವನ್ನು ತೋರಿಸಿರುತ್ತೇನೆ. ತದನಂತರ ಪೋಲಿಸರು ಘಟನಾ ಸ್ಥಳದ ಕರಡು ನಕಾಶೆಯನ್ನು ಸಹ ತಯಾರಿಸಿರುತ್ತಾರೆ. ಸದರಿ ಮಹಜರಿಗೆ ಮತ್ತು ಕರಡು ನಕಾಶೆಗೆ ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿಯ ಘಟನಾ ಸ್ಥಳದ ಮಹಜರ ಮತ್ತು ಕರುಡು ನಕಾಶೆಯನ್ನು ಗುರುತಿಸಿದ ಕಾರಣ ಅವುಗಳನ್ನು **ನಿ.ಪಿ.3** ಮತ್ತು **ನಿ.ಪಿ. 4** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು **ನಿಪಿ.3(ಎ)** ಮತ್ತು **ನಿ.ಪಿ.4(ಎ)** ಎಂದು ಗುರುತಿಸಲಾಯಿತು.

8. ನಾನು ತನಿಖಾ ಸಂದರ್ಭದಲ್ಲಿ ನನ್ನ ಮುಂದುವರೆದ ಹೇಳಿಕೆಯನ್ನು ಪೋಲಿಸರ ಮುಂದೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ. ಕೆ. ವಕೀಲರಿಂದಃ</u>**

ಕಾಲಾವಕಾಶ ಕೋರಿದ್ದು, ಕಾಲಾವಕಾಶವನ್ನು ನೀಡಲಾಯಿತು.

**<u>ಮರುವಿಚಾರಣೆಃ</u>** ಇಲ್ಲ.

(ಸಾಕ್ಷಿದಾರರ ಹೇಳಿಕೆಯಂತೆ ನನ್ನ ಉಕ್ತಲೇಖನ ರೀತ್ಯಾ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ನುಡಿ ಸಾಕ್ಷ್ಯವನ್ನು ಕ್ಯಾಮೆರಾ ಪ್ರೊಸೀಡಿಂಗ್ಸ್ ನಲ್ಲಿ ದಾಖಲಿಸಿಕೊಳ್ಳಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು. (Sitting at Puttur).
ಕಾರ್ಯನಿರ್ವಹಣೆಃ ಪುತ್ತೂರು.